ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯ ಐವಾನ-ಎ-ಶಾಹಿ ಪ್ರದೇಶ ಕಲಬುರಗಿ

ಸಂಖ್ಯೆ:ಸಿ4(1)ಪ್ರೌಶಾಶಿ/ವರ್ಗ/14/2018-19 ದಿನಾಂಕ: 20-09-2018

ಜ್ಞಾಪನಾ

ವಿಷಯ:- 2017-2018 ನೇ ಸಾಲಿನ ಘಟಕದ ಒಳಗಿನ ಮತ್ತು ಘಟಕದ ಹೊರಗಿನ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಕೋರಿಕೆ ವರ್ಗಾವಣೆಯ ತಾತ್ಕಾಲಿಕ ಆಧ್ಯತಾ ಪಟ್ಟಿ, ಹಾಗೂ ಘಟಕದ ಹೊರಗಿನ ಪ್ರಾಥಮಿಕ ಶಾಲಾ ಶಿಕ್ಷಕರ ಕೋರಿಕೆ ವರ್ಗಾವಣಾ ತಾತ್ಕಾಲಿಕ ಪಟ್ಟಿ ಪ್ರಕಟಿಸುವ ಕುರಿತು.

ಉಲ್ಲೇಖ:- 1) ಆಯುಕ್ತರು ಸಾ.ಶಿ.ಇ.ಬೆಂಗಳೂರು ಇವರ ಜ್ಞಾಪನಾ ಸಂಖ್ಯೆ: ಸಿ4(7) ಪ್ರೌಶಿ/ವರ್ಗ-29/ 2017-18 ದಿನಾಂಕ: 18/09/2018

2) ಆಯುಕ್ತರು ಸಾ.ಶಿ.ಇ.ಬೆಂಗಳೂರು ಇವರ ಜ್ಞಾಪನಾ ಸಂಖ್ಯೆ: ಸಿ3(7) ಪ್ರಾಶಿ.ವರ್ಗ-07/ 2017-18 ದಿನಾಂಕ: 17/09/2018

-0-

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ-1 ರ ಜ್ಞಾಪನಾ ಪತ್ರದನ್ವಯ 2017-2018 ನೇ ಸಾಲಿನ ಘಟಕದ ಒಳಗಿನ ಮತ್ತು ಘಟಕದ ಹೊರಗಿನ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ವರ್ಗಾವಣೆಯ ವೇಳಾ ಪಟ್ಟಿಯನ್ನು ಪ್ರಕಟಿಸಿರುತ್ತಾರೆ. ಹಾಗೂ ಉಲ್ಲೇಖ-2 ರ ಜ್ಞಾಪನಾದನ್ವಯ ಘಟಕದ ಹೊರಗಿನ ಸರ್ಕಾರಿ ಪ್ರಾಥಮಿಕ ಶಾಲಾ ಸಹ ಶಿಕ್ಷಕರ ಕೋರಿಕೆ ವರ್ಗಾವಣೆಯ ತಾತ್ಕಾಲಿಕ ಆಧ್ಯತಾ ಪಟ್ಟಿ ಬಿಡುಗಡೆ ಮಾಡಿರುತ್ತಾರೆ. ಅದನ್ನು ಈ ಕಾರ್ಯಾಲಯದ ವೆಬ್‌ಸೈಟ್ cpigulbarga.kar.nic.in ದಲ್ಲಿ ಪ್ರಕಟಿಸಲಾಗಿದೆ. ಇದನ್ನು ನಿಮ್ಮ ಜಿಲ್ಲೆಯ ಎಲ್ಲ ಶಿಕ್ಷಕರ ಗಮನಕ್ಕೆ ತರುವ ಹಿನ್ನೆಲೆಯಲ್ಲಿ ರಾಜ್ಯ ಮಟ್ಟದ ದಿನ ಪತ್ರಿಕೆಯಲ್ಲಿ ಪ್ರಕಟಿಸಿ ಶಿಕ್ಷಕರ ಗಮನಕ್ಕೆ ತರಲು ಅಗತ್ಯ ಕ್ರಮ ಅನುಸರಿಸುವುದು.

ಸದರಿ ಪಟ್ಟಿಯಲ್ಲಿನ ಶಿಕ್ಷಕರುಗಳು ತಮ್ಮ ಸೇವಾ ಪುಸ್ತಕ / ಟಿ.ಡಿ.ಎಸ್. ದಾಖಲಿಸಿದ ಸೇವಾವಿವರಗಳನ್ನು ನೋಡಿಕೊಳ್ಳಲು ಸೂಕ್ತ ನಿರ್ದೇಶನ ನೀಡುವುದು. ಈ ವರ್ಗಾವಣೆಯ ಕ್ರಮದ ಬಗ್ಗೆ ವರ್ಗಾವಣಾ ಮಾರ್ಗಸೂಚಿಯಲ್ಲಿ ಮತ್ತು schooleducation.kar.nic.in ದಲ್ಲಿ ಸೂಚಿಸಿರುವಂತೆ ಕ್ರಮ ಅನುಸರಿಸಲು ತಿಳಿಸಿದೆ. ಸದರಿ ವೇಳಾ ಪಟ್ಟಿಯಂತೆ ಕಾಲಕಾಲಕ್ಕೆ ಕೈಗೊಳ್ಳಬೇಕಾದ ಕ್ರಮಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ತಿಳಿಸಿದೆ.

ತಮಗೆ ವರ್ಗಾವಣೆಗೆ ಸಂಬಂಧಿಸಿದಂತೆ ವಹಿಸಿದ ಕ್ರಮಗಳನ್ನು ಲೋಪಗಳಿಲ್ಲದಂತೆ ನಿರ್ವಹಿಸಲು ತಿಳಿಸಿದೆ. ಉಲ್ಲೇಖದಲ್ಲಿನ [illegible] ವೇಳಾ ಪಟ್ಟಿಗಳಂತೆ ಕ್ರಮ ಅನುಸರಿಸುವಲ್ಲಿ ವಿಫಲರಾದಲ್ಲಿ ಮುಂದಿನ ಆಗುಹೋಗುಳಿಗೆ ತಾವೆ ಸಂಪೂರ್ಣ ಹೊಣೆಗಾರರಾಗುತ್ತಿರಿ ಎಂಬ ವಿಷಯವನ್ನು ಸ್ಪಷ್ಟಪಡಿಸಿದೆ. ಪ್ರಯುಕ್ತ ತಪ್ಪುಗಳನ್ನು ಆಗದಂತೆ ಎಚ್ಚರಿಕೆಯಿಂದ ನಿರ್ವಹಿಸಲು ತಿಳಿಸಿದೆ.

(signature) 20/9/18

ಸಹ ನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆಯ
ಅಪರ ಆಯುಕ್ತಾಲಯ ಕಲಬುರಗಿ

ಗೆ,
ಉಪ ನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ
ಕಲಬುರಗಿ , ಬೀದರ, ರಾಯಚೂರು ಮತ್ತು ಬಳ್ಳಾರಿ, ಕೊಪ್ಪಳ, ಯಾದಗಿರಿ.

ಪ್ರತಿಯನ್ನು:-

1) ನಿರ್ದೇಶಕರು (ಪ್ರೌಢ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರವರ ಕಾರ್ಯಾಲಯ ನೃಪತುಂಗರಸ್ತೆ ಬೆಂಗಳೂರು-560001 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಪ್ರೋಗ್ರಾಮರ ಇ ಗೌರ್ನರ್ಸ ಈ ಕಾರ್ಯಾಲಯ ಇವರಿಗೆ ಕೊಡುತ್ತಾ ತಾತ್ಕಾಲಿಕ ಆಧ್ಯತಾ ಪಟ್ಟಿಯನ್ನು ಈ ಕಾರ್ಯಾಲಯದ ವೆಬ್‌ಸೈಟ್‌ದಲ್ಲಿ ಪ್ರಕಟಿಸಲು ತಿಳಿಸಿದೆ.

Scanned by CamScanner